ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

ಸಂಖ್ಯೆ:ವಾತೆಜಂಆ(ಜಾ)/ಸಿಬ್ಬಂದಿ-1/ಎ/ಸಿಆರ್14/2020-21

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ
(ಜಾಗೃತಿ) ವಾಣಿಜ್ಯ ತೆರಿಗೆ ಕಾರ್ಯಾಲಯ-2.
3ನೇ ಮಹಡಿ, 80 ಅಡಿರಸ್ತೆ ರಾಜೇಂದ್ರ ನಗರ,
ಕೋರಮಂಗಲ, ಬೆಂಗಳೂರು-560 047.
ದೂ:080-25704962 ದಿನಾಂಕ: 16.04.2021.

**ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ**

ವಿಷಯ: ಈ ವಿಭಾಗದಲ್ಲಿರುವ ನಿರುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ (ಕೇಂದ್ರ) ಕೋರಮಂಗಲ ಬೆಂಗಳೂರು ಹಾಗೂ ತುಮಕೂರು ಇವರ ತಪಾಸಣಾ ವರದಿ ದಿ: 19-06-2020 ಮತ್ತು 27-05-2020.
2) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರ ಪತ್ರ ಸಂ.ವಿಹೆಚ್‌ಟಿ.ಸಿಆರ್.12/2015-16, ದಿ: 31.08.2020.

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಬೆಂಗಳೂರು ಈ ವಿಭಾಗದ ಈ ಕೆಳಕಂಡ ವಾಹನಗಳು ಉಲ್ಲೇಖ(1)ರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಕೋರಮಂಗಲ,ಬೆಂಗಳೂರು ಇವರ ತಪಾಸಣಾ ವರದಿ ಅನ್ವಯ ನಿರುಪಯುಕ್ತ ವಾಹನ ಆಗಿರುವ ಕಾರಣ ಉಲ್ಲೇಖ(2)ರಲ್ಲಿ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು,ಕರ್ನಾಟಕ,ಬೆಂಗಳೂರು ಇವರು 05 ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಅನುಮತಿ ನೀಡಿರುವುದರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಈ ಕೆಳಕಂಡ ದಿನಾಂಕವನ್ನು ನಿಗದಿಪಡಿಸಿದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಬಹಿರಂಗ ಹರಾಜು ದಿನಾಂಕ | 28.04.2021 |
| 2 | ಸಮಯ | 3.30 ಅಪರಾಹ್ನ |
| 3 | ಹರಾಜು ಮಾಡುವ ಸ್ಥಳ | ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ವಿ.ಟಿ.ಕೆ-2, ಕೋರಮಂಗಲ, ಬೆಂಗಳೂರು-47. |

| ಕ್ರ.ಸಂ. | ವಾಹನದ ಹೆಸರು | ವಾಹನ ಸಂಖ್ಯೆ | ತಯಾರಿಕೆ ವರ್ಷ | ಇಂಧನ | ಹರಾಜು ಮಾಡಲು ನಿಗದಿಪಡಿಸಿದ ಮೊತ್ತ |
|---|---|---|---|---|---|
| 1 | ಟಾಟಾ ಸುಮೋ | ಕೆಎ-02 ಜಿ-0023 | 2000 | ಡೀಸೆಲ್ | ರೂ.25,500-00 ಮತ್ತು ತೆರಿಗೆ |
| 2 | ಟಾಟಾ ಸುಮೋ | ಕೆಎ-02 ಜಿ-0026 | 2000 | ಡೀಸೆಲ್ | ರೂ.25,500-00 ಮತ್ತು ತೆರಿಗೆ |
| 3 | ಸ್ಕಾರ್ಪಿಯೋ | ಕೆಎ-02 ಜಿ-435 | 2005 | ಡೀಸೆಲ್ | ರೂ.35,000-00 ಮತ್ತು ತೆರಿಗೆ |
| 4 | ಟಾಟಾ ಸುಮೋ | ಕೆಎ-01 ಜಿ-5300 | 2010 | ಡೀಸೆಲ್ | ರೂ.32,000-00 ಮತ್ತು ತೆರಿಗೆ |
| 5 | ಸ್ಕಾರ್ಪಿಯೋ | ಕೆಎ-02 ಜಿ-448 | 2005 | ಡೀಸೆಲ್ | ರೂ.35,000-00 ಮತ್ತು ತೆರಿಗೆ |

**ನಿಬಂಧನೆಗಳು:**

| | |
|---|---|
| 1 | ಮೇಲೆ ತಿಳಿಸಿರುವ ನಿರುಪಯುಕ್ತ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾಗೃತಿ), ಬೆಂಗಳೂರು ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು. |
| 2 | The Disposal of vechicle shall be strictly on "AS IS WHERE IS BASIS" and no guarantee or certificate o fits worthiness or Quality will be given by DEPARTMENT OF COMMERCIAL TAXES. |
| 3 | ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು. |
| 4 | ಈ ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು **ದಿನಾಂಕ:26-04-2021** ರಂದು ಯಾವ ವಾಹನದ ಸಂಬಂಧ ಹರಾಜಿನಲ್ಲಿ ಪಾಲ್ಗೊಳ್ಳುವವರು ಸದರಿ ವಾಹನದ ಹರಾಜು ಮಾಡಲು ನಿಗದಿಪಡಿಸಿದ ಕನಿಷ್ಠ ಮೌಲ್ಯದ ಶೇ.20ರಷ್ಟು ಹಣವನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾಗೃತಿ), ಕೋರಮಂಗಲ, ಬೆಂಗಳೂರು-47 ರವರ ಕಛೇರಿಯಲ್ಲಿ ಡಿ.ಡಿ. ರೂಪದಲ್ಲಿ ಠೇವಣಿ ಮಾಡಿ ರಸೀತಿ ಪಡೆಯತಕ್ಕದ್ದು. ಠೇವಣಿ ಪಾವತಿ ಮಾಡುವ ದಿನದಂದು ಗುರುತಿನ ಚೀಟಿಯನ್ನು ತರತಕ್ಕದ್ದು ಹಾಗೂ ಸದರಿ ಗುರುತಿನ ಚೀಟಿಯ ನಕಲನ್ನು ಸಲ್ಲಿಸುವುದು. ಠೇವಣಿಯು ಯಾರ ಹೆಸರಿನಲ್ಲಿ ಇರುವುದೋ ಅವರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಇರುತ್ತದೆ. ಬೇರೆಯವರಿಗೆ ಅವಕಾಶ ಇರುವುದಿಲ್ಲ. ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ. |
| 5 | ವಾಹನವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆ ಸಿಕ್ಕ ನಂತರ 15 ದಿನಗಳೊಳಗಾಗಿ ಪೂರ್ತಿ ಹಣವನ್ನು ಡಿ.ಡಿ. ಮುಖಾಂತರ ಪಾವತಿ ಮಾಡಿ ನಂತರ ಸ್ವಂತ ಖರ್ಚಿನಲ್ಲಿ ಯಥಾಸ್ಥಿತಿಯಲ್ಲಿ ಹಾಲಿ ಇರುವ ಜಾಗದಿಂದ ಸಾಗಿಸಿಕೊಳ್ಳತಕ್ಕದ್ದು. |
| 6 | ವಾಹನವನ್ನು ಪರೀಕ್ಷಿಸಲು ಈ ವಿಭಾಗದ ಅಧೀನ ಕಛೇರಿಯಾದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು(ಜಾರಿ), ವಾಣಿಜ್ಯ ತೆರಿಗೆಗಳ ಸಂಕೀರ್ಣ,80 ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ,**ತುಮಕೂರು-572103.** ಕಛೇರಿಯಲ್ಲಿ ಸರ್ಕಾರಿ ವಾಹನ ನಂ. ಕೆಎ-02/ಜಿ-0023 ಹಾಗೂ ಕೆಎ-02/ಜಿ-0026 ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪರಿಶೀಲಿಸಬಹುದು. ಜಾಗೃತಿ ವಿಭಾಗದ ಸರ್ಕಾರಿ ವಾಹನಗಳಾದ ಕೆಎ-02 ಜಿ-435, ಕೆಎ-01 ಜಿ-5300, ಕೆಎ-02 ಜಿ-448 ವಾಹನವನ್ನು ಪರೀಕ್ಷಿಸಲು ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಜಾಗೃತಿ), ಕೋರಮಂಗಲ, ಬೆಂಗಳೂರು-47 ಕಛೇರಿಯ ಆವರಣದ ಶೆಡ್‌ನಲ್ಲಿ ಪರಿಶೀಲಿಸಬಹುದು. |
| 7 | ಹರಾಜಿನಲ್ಲಿ ಹಣ ಪಾವತಿಸಿ ಯಶಸ್ವಿ ಆಗದವರಿಗೆ, ಪಾವತಿಸಿದ ಡಿ.ಡಿ. ರೂಪದಲ್ಲಿ ಠೇವಣಿಯನ್ನು ಕೂಡಲೇ ಹಿಂತಿರುಗಿಸಲಾಗುವುದು. |
| 8 | ಬಹಿರಂಗ ಹರಾಜು ಮುಗಿದ ಮೇಲೆ ಅತೀ ಹೆಚ್ಚು ಬಿಡ್ಡುದಾರರು ಕೂಡಲೇ ಮಾರಾಟದ ಮೊತ್ತ ಹಾಗೂ ತೆರಿಗೆಗಳು ಸೇರಿದಂತೆ ಶೇ.50 ಭಾಗ ಹಣವನ್ನು ಪಾವತಿ ಮಾಡದೇ ಹೋದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. |
| 9 | ಉಳಿದ ಶೇ.50 ಭಾಗ ಹರಾಜಿನ ಹಣವನ್ನು ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಂದ ಒಪ್ಪಿಗೆ ಪತ್ರ ದೊರೆತ ದಿನಾಂಕದಿಂದ 15 ದಿನಗಳೊಳಗಾಗಿ ಪಾವತಿಸಿ ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ |

| | |
|---|---|
| | ಜಾಗದಿಂದ ಯಥಾಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು. |
| 10 | ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗಧಿತ ಅವಧಿಯೊಳಗೆ ಪೂರ್ತಿ ಹಣ ಪಾವತಿಸಿ, ಸ್ವಾಧೀನಕ್ಕೆ ತೆಗೆದುಕೊಳ್ಳದೇ<br>ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ. 50–00 ನೆಲ ಬಾಡಿಗೆ ವಿಧಿಸಲಾಗುವುದು ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ<br>ಪಾವತಿಸದಿದ್ದರೆ, ಈಗಾಗಲೇ ಪಾವತಿಸಿರುವ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಹರಾಜು<br>ಮೂಲಕ ವಿಲೇವಾರಿ ಮಾಡಲಾಗುವುದು. |
| 11 | ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ. |
| 12 | ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು<br>(ಜಾಗೃತಿ), ಬೆಂಗಳೂರು ಇವರ ತೀರ್ಮಾನವೇ ಅಂತಿಮವಾದುದು. |
| 13 | ಯಾವುದೇ ಸಂದರ್ಭದಲ್ಲಿಯು ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಇವರಿಗೆ ಸಂಬಂಧಪಟ್ಟಿರುತ್ತದೆ. |

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾಗೃತಿ) ಬೆಂಗಳೂರು.

ಪ್ರತಿಗಳನ್ನು:

1) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು, ಡಿವಿಓ–1,2,3,4,5 ಮತ್ತು 6 ಬೆಂಗಳೂರು, ವಾ.ತೆ.ಅ.ಆ (ಜಾರಿ) ಬೆಂಗಳೂರು. ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.

3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಕೇಂದ್ರ) ಬೆಂಗಳೂರು ಇವರಿಗೆ ಮಾಹಿತಿಗಾಗಿ.

4) ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ.(5) ವಾಣಿಜ್ಯ ತೆರಿಗೆ ಉಪ ಆಯುಕ್ತರು, (ಗಣಕ ಕೇಂದ್ರ)ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ
ಇಲಾಖಾ ವೆಬ್‌ಸೈಟ್‌ನಲ್ಲಿ ಸದರಿ ಪತ್ರವನ್ನು ಪ್ರಕಟಿಸಲು ಇವರಿಗೆ ಕಳುಹಿಸಲಾಗಿದೆ.(6) ಕಛೇರಿ ಕಡತಕ್ಕೆ.